ಕಾಲೇಜು	ಮಂಜೂರಾದ ಬೋಧಕ ಹುದ್ದೆಗಳು	ಮಂಜೂರಾದ ಬೋಧಕೇತರ ಹುದ್ದೆಗಳು	ನಿಯೋಜನೆ ಗೊಳಿಸಿದ ಬೋಧಕ/ ಬೋಧಕೇತರ ವಿವರ
ಸಪ್ರದಕಾ, ಮಾಗಡಿ	14	12	ಬೋಧಕ–3 ಬೋಧಕೇತರ–0
ಸಪ್ರದಕಾ, ಕುದೂರು	09	11	ಬೋಧಕ–0 ಬೋಧಕೇತರ–0
ಸಪ್ರದಕಾ, ಬಿಡದಿ	09	10	ಬೋಧಕ–1 ಬೋಧಕೇತರ–0

ಇ)

ಕಾಲೇಜು	ಖಾಲಿ ಹುದ್ದೆಗಳು	
	ಬೋಧಕ	ಬೋಧಕೇತರ
ಸಪ್ರದಕಾ, ಮಾಗಡಿ	03	ಮ್ಯಾನೇಜರ್ 01 ಪರಿಚಾರಕರು 03
ಸಪ್ರದಕಾ, ಕುದೂರು	01	ದ್ವಿ.ಡ.ಸ. 01 ಪರಿಚಾರಕರು 01
ಸಪ್ರದಕಾ, ಬಿಡದಿ	–	ಅಟೆಂಡರ್ 01 ಪರಿಚಾರಕರು 03

ಈ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಸಂಖ್ಯೆ : ಆಇ 01 ಬಿಇಎಂ 2012 ದಿನಾಂಕ : 14–06–2012 ಹಾಗೂ ಸಂಖ್ಯೆ:ಆಇ 01 ಬಿಇಎಂ 2008 ದಿನಾಂಕ : 21–10–2009ರ ಸುತ್ತೋಲೆಗಳಲ್ಲಿ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ಬೋಧಕೇತರ ಹುದ್ದೆಗಳನ್ನು ಸೃಜಿಸುವ/ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಮಿತವ್ಯಯ ಆದೇಶ ಹಿಂಪಡೆದ ನಂತರ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು.

ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು

270 (547) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ

ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಕಾಮಗಾರಿಯನ್ನು ಯಾವಾಗ ಮಾಡಲಾಗುವುದು? (ಮಾಹಿತಿ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಮಾರ್ಗಸೂಚಿಗಳ ಪ್ರಕಾರ, 1,20,000 ಜನಸಂಖ್ಯೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿದ್ದು, ಲಿಂಗಸುಗೂರು ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 2,47,326 ಆಗಿದ್ದು, 2 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿದೆ. ಆದರೆ, ಸದರಿ ತಾಲ್ಲೂಕಿನಲ್ಲಿ ಈಗಾಗಲೇ 3 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಮಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶ ಇರುವುದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ದಿನಾಂಕ : 11–01–2011 ರಿಂದ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆ ಹಿಡಿದಿದೆ.

ಉಪನ್ಯಾಸಕರ ಕೊರತೆ

232(883) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮದ್ದೂರು ಟೌನ್‌ನಲ್ಲಿರುವ ಮಹಿಳಾ ದರ್ಜೆ ಕಾಲೇಜಿನ ಉಪನ್ಯಾಸಕರನ್ನು ಬೇರೆ ಕಡೆ ನಿಯೋಜನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಸದರಿ ಕಾಲೇಜಿನಲ್ಲೇ ಉಪನ್ಯಾಸಕರ ಕೊರತೆಯಿದ್ದರೂ ಸಹ ಬೇರೆಕಡೆ ನಿಯೋಜನೆ ಮಾಡಲು ಕಾರಣವೇನು ; ಈ ನಿಯೋಜನೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ತೊಂದರೆಯನ್ನು ತಪ್ಪಿಸಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು (ಮಾಹಿತಿ ನೀಡುವುದು) ?